ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

## CC No.7741/2021 CW-1 PW-1

| | | |
|---|---|---|
| ಹೆಸರು | : | ಲಾಲಬೀ |
| ಗಂಡನ ಹೆಸರು | : | ಹುಸೇನಸಾಬ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 24-06-2024

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದ

1 ನೇ ಆರೋಪಿ ನನ್ನ ಗಂಡ. 2 ರಿಂದ 6 ನೇ ಆರೋಪಿತರು ನನ್ನ ಸಂಬಂಧಿಕರು. ಚಾಸಾ-6 ನನ್ನ ತಂದೆ, ಚಾಸಾ-7 ನನ್ನ ತಾಯಿ, ಚಾಸಾ-8 ರಿಂದ 15 ರವರ ಪರಿಚಯ ಇದೆ.

ನನ್ನ ಮದುವೆ ದಿಃ05-06-2020 ರಂದು ಕವಿತಾಳನಲ್ಲಿ 1 ನೇ ಆರೋಪಿಯೊಂದಿಗೆ ಆಗಿರುತ್ತದೆ. ಸದರಿ ಮದುವೆ ಮಾತುಕತೆ ವೇಳೆ ರೂ.10,000/- ನಗದು, ಅರ್ಧ ತೊಲೆ ಬಂಗಾರ ಹಾಗೂ ರೂ.50 ಸಾವಿರ ಬೆಲೆಬಾಳವ ಮನೆಬಳಕೆ ಸಾಮಾನುಗಳನ್ನು ಹಾಗೂ ಬಟ್ಟೆಗಳನ್ನು ಕೊಟ್ಟಿದ್ದು ಇರುತ್ತದೆ.

ಮದುವೆ ನಂತರ ನಾರಾಯಣಪುರದ ನನ್ನ ಗಂಡನ ಮನೆಗೆ ಹೋಗಿದ್ದು, ಸದರಿ ದಿನ ಆರೋಪಿ ನನಗೆ ನೀನು ಇಷ್ಟ ಇಲ್ಲ ಹಾಗೂ ನನ್ನ ತಾಯಿ, ದೊಡ್ಡಪ್ಪನ ಒತ್ತಾಯದಿಂದ ಮದುವೆ ಆಗಿರುವುದಾಗಿ ತಿಳಿಸಿರುತ್ತಾನೆ. 2 ಮತ್ತು 3 ನೇ ಆರೋಪಿತರು ನನಗೆ ಚಿನಾಲಿ, ಸೂಳೆ ಎಂದು ಅವಾಚ್ಯವಾಗಿ ಬೈದು ದೈಹಿಕ ಮಾನಸಿಕ ಕಿರುಕುಳ ನೀಡಿರುತ್ತಾರೆ. ನಂತರ ಮೊಹರಂ ಹಬ್ಬಕ್ಕೆ ನನ್ನನ್ನು ತವರು ಮನೆಗೆ ಆರೋಪಿತರು ನನ್ನನ್ನು ಕಳುಹಿಸಿರುತ್ತಾರೆ. ನಂತರ ನನ್ನ ಗಂಡ ನಮ್ಮ ಮನೆಗೆ ಬಂದು ನನಗೆ ದುಡ್ಡು ಕೊಡಲು ಒತ್ತಾಯಿಸಿದ್ದು ನಾನು ಇಲ್ಲ ಎಂದು ತಿಳಿಸಿದ್ದಕ್ಕೆ ರೂ.5000 ಗಳನ್ನು ದಬ್ಬಾಳಿಕೆಯಿಂದ ತೆಗೆದುಕೊಂಡು ಹೋಗಿರುತ್ತಾನೆ.

ನಂತರ ದಿಃ 13-06-2021 ರಂದು ಸಂಜೆ 6-00 ಗಂಟೆಗೆ 4 ನೇ ಆರೋಪಿಯ ಮನೆಯಲ್ಲಿ ನಾನು, ಚಾಸಾ-6, 7 ಹಾಗೂ ಎಲ್ಲ ಆರೋಪಿತರು ಸೇರಿ ರಾಜಿ ಮಾತನಾಡುತ್ತಿರುವಾಗ 1 ನೇ ಆರೋಪಿ ನನಗೆ ನೀನು ಇಷ್ಟ ಇಲ್ಲ ಹಾಗೂ ನಾನು ಯಶೋಧಾ ಎನ್ನುವವರನ್ನು ಪ್ರೀತಿಸುತ್ತಿದ್ದು ಅವರನ್ನು ಮದುವೆಯಾಗುವುದಾಗಿ ತಿಳಿಸಿರುತ್ತಾನೆ. ನನಗೆ ಜೀವನಾಂಶಕ್ಕಾಗಿ ರೂ.2 ಲಕ್ಷಗಳನ್ನು ಕೊಡುತ್ತೇನೆ ಬೇಕಾದರೆ ಬೇರೆ ಮದುವೆ ಮಾಡಿಕೊ ಎಂದು ಹೇಳಿರುತ್ತಾನೆ. ಅದನ್ನು ಪ್ರಶ್ನಿಸಿದ್ದಕ್ಕೆ ಚಾಸಾ-7 ರವರಿಗೆ 1 ನೇ ಆರೋಪಿ ಹೊಡೆಬಡೆ ಮಾಡಿ ಅವಾಚ್ಯವಾಗಿ ಬೈದಿರುತ್ತಾರೆ. ಉಳಿದ ಆರೋಪಿತರು ಸಹ ನಮ್ಮನ್ನು ಚಿನಾಲಿ ಸೂಳೆ ಎಂದು ಅವಾಚ್ಯವಾಗಿ ಬೈದು, ಹೊಡೆಬಡೆ ಮಾಡಿ ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ.

ದಿಃ 22-06-2021 ರಂದು ಪೋಲೀಸರು ನಾನು ತೋರಿಸಿದ ಮೇರೆಗೆ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಂತರ ದಿಃ 07-07-2021 ರಂದು ನಾರಾಯಣಪೂರದಲ್ಲಿ ಸಹ ನಾನು ತೋರಿಸಿದ ಮೇರೆಗೆ ಗುನ್ನಾ ಸ್ಥಳದ ಪಂಚನಾಮೆಯನ್ನು ಪಂಚರಾದ ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತಾರೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-2 ಮತ್ತು 3 ಎಂದು, ಸಾಕ್ಷಿ ಸಹಿಗಳನ್ನು ನಿಪಿ-2 ಎ ಮತ್ತು 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-4 ರಿಂದ 6 ಎಂದು ಗುರುತಿಸಲಾಯಿತು.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿತರು ನ್ಯಾಯಾಲಯಕ್ಕೆ ಗೈರು ಹಾಜರಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಸಮಯ ಕೋರಿದ್ದು ರೂ.200/- ದಂಡದೊಂದಿಗೆ ಮುಂದೂಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.